PW- 08

CW-13

<u>ದಿನಾಂಕ**: 24.07.2025** ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.</u>

<u>ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ</u>

1. ಮೃತ ಶಾಂತಾಬಾಯಿ 4 ಗಂಡು ಮಕ್ಕಳು ಏಕೆ ಪ್ರತ್ಯೇಕವಾಗಿ ವಾಸಿಸುತ್ತಿದ್ದರು ಎಂಬ ಬಗ್ಗೆ ನನಗೆ ಮಾಹಿತಿ ಇಲ್ಲ. ಅವರ ಮದ್ಯದಲ್ಲಿ ಆಸ್ತಿಗೆ ಹಾಗೂ ಬಂಗಾರಕ್ಕೆ ಸಂಬಂದಪಟ್ಟಂತೆ ಜಗಳವಿದ್ದ ಬಗ್ಗೆ ನನಗೆ ಗೊತ್ತಿಲ್ಲ. ಸದರಿ ವಿಷಯವಾಗಿ ಪ್ರಾಸಾ-9 ಮೃತ್ಯುಂಜಯ ಮತ್ತು ಪ್ರಾಸಾ-2 ಪಂಚಾಯಿತಿ ಮಾಡಿದ ಬಗ್ಗೆ ನನಗೆ ಗೊತ್ತಿಲ್ಲ. ಮೃತ ಶಾಂತಾಬಾಯಿ ಇವರ ಮನೆ ನಮ್ಮ ಮನೆಯ ಮುಂದೆ ಇದೆ. ಸದರಿ ಮನೆ ಮಾರುಕಟ್ಟೆ ರಸ್ತೆಯಲ್ಲಿದ್ದು ಸಾಕಷ್ಟು ಜನಸಂದಣಿಯಿಂದ ಕೂಡಿರುತ್ತದೆ ಎಂದರೆ ಸರಿ. ಆ ರಸ್ತೆಯಲ್ಲಿ ಬ್ಯಾಂಕ ಮತ್ತು ಎಟಿಎಮ್ ಗಳು ಇವೆ ಎಂದರೆ ಸರಿಯಲ್ಲ. ಅವುಗಳು ದೂರ ಇರುತ್ತವೆ ಎಂದು ಹೇಳುತ್ತಾರೆ.

2. ನಾನು ಮೃತ ಶಾಂತಾಬಾಯಿ ಯವರ ಮನೆಗೆ ಮೊದಲು ಯಾವತ್ತು ಹೋಗಿರುವುದಿಲ್ಲ. ಅದೇ ಮೊದಲ ಬಾರಿಗೆ ಹೋಗಿರುತ್ತೇನೆ. ನಾನು ಸದರಿಯವರ ಮನೆಗೆ 8.30 ಕ್ಕೆ ಹೋಗಿರುತ್ತೇನೆ. ಪ್ರಾಸಾ-7 ಗೀತಾ ನನಗೆ ಕರೆ ಮಾಡಿದ್ದರು. ಯಾವ ದೂರವಾಣಿ ಸಂಖ್ಯೆಯಿಂದ ಎಂದು ನನಗೆ ನೆನಪಿಲ್ಲ. ನಾನು ಪ್ರಾಸಾ-7 ಗೀತಾ ನನಗೆ ಎಷ್ಟು ಗಂಟೆಗೆ ಕರೆ ಮಾಡಿದ್ದರು ಎಂದು ಪೋಲಿಸರ ಮುಂದೆ ಹೇಳಿಲ್ಲ. ಪೋಲಿಸರು ನನ್ನನ್ನು ವಿಚಾರಿಸಿ ಹೇಳಿಕೆ ಪಡೆದುಕೊಂಡಿರುತ್ತಾರೆ . ಪೋಲಿಸರು ನನ್ನ ಹೇಳಿಕೆಯನ್ನು ಘಟನೆಯ ದಿನ ಬೆಳಿಗ್ಗೆ 10.00 – 10.30 ಗೆ ತೆಗೆದುಕೊಂಡಿರುತ್ತಾರೆ. ನನ್ನ ಮನೆಯ ಹತ್ತಿರವೇ ನನ್ನ ಹೇಳಿಕೆಯನ್ನು ದಾಖಲಿಸಿಕೊಳ್ಳಲಾಗಿದೆ.

3. ಪೋಲಿಸರು ಆ ದಿನ ಹೊರತು ಪಡಿಸಿ ಬೇರೆ ಯಾವ ದಿನವೂ ನನ್ನನ್ನು ವಿಚಾರಿಸಿಲ್ಲ. ನಾನು ಪೋಲಿಸರ ಮುಂದೆ ನನಗೆ ಗೀತಾ ಕರೆ ಮಾಡಿದ್ದಕ್ಕೆ ನಾನು ಹೋದೆ ಎಂದು ಮಾತ್ರ ಹೇಳಿದ್ದ , ಬೇರೆ ಏನು ಹೇಳಿಲ್ಲ.

4. ನಾನು ಪೋಲಿಸರ ಮುಂದೆ " ಆರೋಪಿ ಮತ್ತು ಅವನ ಹೆಂಡತಿ ಶಾಂತಾಬಾಯಿ ಮನೆಯ ಮೇಲಿರುವ ಅಟ್ಟದ ಮನೆಯನ್ನು ಬಾಡಿಗೆ ಕೇಳುವ ನೆಪದಲ್ಲಿ ಅವರ ಮನೆಗೆ ಬಂದು ಹೊಗಿ ಮಾಡಿ, ದಿಃ16.08.2019 ರಂದು ರಾತ್ರಿ 11.30 ರ ಸುಮಾರಿಗೆ ಅವಳ ಮನಗೆ ಬಂದು ಅವಳೊಂದಿಗೆ ಮಾತನಾಡಿಸುವ ನೆಪ ಮಾಡಿ ಅವಳ ಮೈಮೇಲಿನ ಆಬರಣಗಳನ್ನು ಕಿತ್ತುಕೊಳ್ಳಲು ಪ್ರಯತ್ನ ಮಾಡಿದ್ದು, ಅವಳು ಕೊಡದೇ ಇದ್ದಾಗ

ಇಬ್ಬರು ಸೇರಿ ಅವಳ ಮನೆಯ ಮಂಚಕ್ಕೆ ಕೈಯನ್ನು ಕಟ್ಟಿ , ಕುತ್ತಿಗೆಗೆ ಮತ್ತು ಕಣ್ಣಿಗೆ ಸೀರೆಯಿಂದ ಬಿಗಿದು , ತಲೆದಿಂಬಿನಿಂದ ಉಸಿರುಗಟ್ಟಿಸಿ ಕೊಲೆ ಮಾಡಿದ್ದು, ಆಗ ದಿಃ17.08.2019 ಬೆಳಗಿನ ಜಾವ 3.00 ಗಂಟೆಯಾಗಿದ್ದು ನಂತರ ಅವಳ ಮೈ ಮೇಲಿ ಇದ್ದ ಬಳೆ ಮತ್ತು ಚೈನ ಸರವನ್ನು ಕಿತ್ತುಕೊಂಡು ಆರೋಪಿತರು ತಮ್ಮ ವಾಸದ ಮನೆಯಲ್ಲಿ ಇಟ್ಟು ನಂತರ ವಿಷಯ ಗೊತ್ತಾದರೆ ತಮ್ಮನ್ನು ಉಳಿಸುವುದಿಲ್ಲ ಎಂದು ತಿಳಿದು, ಆರೋಪಿ ತನ್ನ ಮಕ್ಕಳನ್ನು ಮೊದಲು ಊರಿಗೆ ಕಳುಹಿಸಿಕೊಟ್ಟು ನಂತರ ಅವರಿಬ್ಬರು ಸಹ ಮನೆಯಿಂದ ಹೊರಟು ಹುಬ್ಬಳ್ಳಿಯ ಉಣಕಲ್ ಕೆರೆಗೆ ಹೋಗಿ , ತಮ್ಮ ಮಕ್ಕಳನ್ನ ಕರೆಸಿಕೊಂಡು ಮೃತ ಶಾಂತಾಬಾಯಿಯನ್ನು ಕೊಲೆ ಮಾಡಿದ ವಿಷಯ ಹೇಳಿ ನಂತರ ವಿಷ ಕುಡಿದು ಸಾಯಲು ಪ್ರಯತ್ನಿಸಿದರು" ಎಂದು ಹೇಳಿಕೆ ಕೊಟ್ಟಿರುವುದಿಲ್ಲ. ಸದರಿ ಹೇಳಿಕೆಯ ಭಾಗವನ್ನು ನಿಡಿ-7 ಎಂದು ಗುರುತಿಸಲಾಯಿತು.

5. ನಾನು ಘಟನಾ ಸ್ಥಳಕ್ಕೆ ಹೋದಾಗ ಯಾರು ಇರಲಿಲ್ಲ. ಶಾಂತಾಬಾಯಿ ರಾತ್ರಿ ಮನೆಯ ಬಾಗಿಲನ್ನು ಹಾಕಿಕೊಂಡು ಮಲಗುತ್ತಿದ್ದಳು ಎಂದರೆ ಸರಿ. ಸದರಿ ಬಾಗಿಲು ನಾನು ಹೋದಾಗ ಮುರಿದ ಸ್ಥಿತಿಯಲ್ಲಿ ಇರಲಿಲ್ಲ. ಮೇಲಿನ ಹಂಚುಗಳು ತೆಗೆದ ಸ್ಥಿತಿಯಲ್ಲಿ ಇರಲಿಲ್ಲ. ನನಗೆ ಶಾಂತಾಬಾಯಿಯನ್ನು ಯಾರು ಕೊಲೆ ಮಾಡಿರುತ್ತಾರೆಂದು ವೈಯಕ್ತಿಕ ಮಾಹಿತಿ ಇಲ್ಲ. ಪ್ರಾಸಾ-7 ಗೀತಾ ನನ್ನ ಮುಂದೆ ತಾಯಿಯ ಕೊಲೆ ವಿಷಯವಾಗಿ ಅವರ ಮನೆಗೆ ಯಾರಾದರೂ ಬಂದ ಬಗ್ಗೆ ಯಾವತ್ತು ತಿಳಿಸಿಲ್ಲ. ಪ್ರಾಸಾ-7 ಗೀತಾ ನನ್ನ ಮುಂದೆ ಆರೋಪಿ ಮತ್ತು ಅವನ ಹೆಂಡತಿ ಬಾಡಿಗೆಗಾಗಿ ಶಾಂತಾಬಾಯಿ ಮನೆಗೆ ಒಬ್ಬ ಮಹಿಳೆಯನ್ನು ಕರೆದುಕೊಂಡು ಬಂದರು ಎಂದು ಹೇಳಿರುವುದಿಲ್ಲ.

6. ನಾನು ಘಟನಾ ಸ್ಥಳಕ್ಕೆ ಹೋದಾಗ ಅಲಿ ಗ್ಯಾಸ್ ವಾಸನೆ ಬರುತ್ತಿತ್ತು. ಗ್ಯಾಸನ ಪೈಪ್ ಕಳಚಿತ್ತೋ ಇಲ್ಲವೋ ನಾನು ನೋಡಿಲ್ಲ. ಗ್ಯಾಸ ಸೀಲೆಂಡರ್ ಎಲ್ಲಿ ಇತ್ತು ಸಹ ನಾನು ನೋಡಿಲ್ಲ. ಶಾಂತಾಬಾಯಿಗೆ ಎಲ್ಲಿ , ಏನು ಗಾಯಗಳಾಗಿದ್ದವು ಎಂದು ನಾನು ನೋಡಿಲ್ಲ. ನಾನು ಅಲ್ಲಿ ಯಾವ ವಸ್ತುಗಳು ಇದ್ದವು ಎಂದು ನಾನು ನೋಡಿಲ್ಲ. ನಾನು ಯಾವತ್ತು ಶಾಂತಾಬಾಯಿ ಯಾವ ಆಭರಣಗಳು ಧರಿಸಿಸುತ್ತಿದ್ದರು ಎಂದು ನಾನು ನೋಡಿಲ್ಲ. ಶಾಂತಾಬಾಯಿಯವರ ಆಭರಣಗಳು ಯಾವುವು ಎಂದು ಗುರುತಿಸಲು ನನಗೆ ಆಗುವುದಿಲ್ಲ. ಮುಮಾ-4 ರಿಂದ 16 ನನಗೆ ಯಾವುವು ಎಂದು ಗುರುತಿಸಲು ಆಗುವುದಿಲ್ಲ.

7. ನಾನು ಘಟನೆಯಾದ ಆರೋಪಿಯು ಮನೆಯಲ್ಲಿ ಇದ್ದನೋ ಇಲ್ಲವೋ ಎಂದು ನೋಡಲು ಹೋಗಿಲ್ಲ. ನಾನು ಮೊದಲು ಈ ನ್ಯಾಯಾಲಯದ ಮುಂದೆ ಸಾಕ್ಷಿಯನ್ನು ಪೊಲೀಸರು ನೀಡಿದ ಮಾಹಿತಿಯಂತೆ ಹೇಳಿರುತ್ತೇನೆ. ನನಗೆ ಈ ಪ್ರಕರಣದ ಬಗ್ಗೆ ವೈಯಕ್ತಿಕವಾಗಿ ಏನು ಮಾಹಿತಿ ಇಲ್ಲ.

8. ನನಗೆ ಪ್ರಾಸಾ-7 ಗೀತಾ ಕರೆ ಮಾಡಿ , ನಾನು ತಾಯಿಗೆ ದೂರವಾಣಿ ಕರೆ ಮಾಡಿದ್ದು ಅವಳು ಎತ್ತುತ್ತಿಲ್ಲ ಏನು ಮಾಡುತ್ತಿದ್ದಾಳೆ ನೋಡಿ ಎಂದು ಹೇಳಿದಳು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

9. ದಿಃ 16.08.2019 ರಂದು ಆಸ್ತಿಗೆ ಸಂಬಂದಿಸಿದಂತೆ ಸಾಯಂಕಾಲ ಜಗಳ ಆಗಿತ್ತು ಎಂದರೆ ನನಗೆ ಗೊತ್ತಿಲ್ಲ. ಆ ಜಗಳ ವಿಕೋಪಕ್ಕೆ ಹೋಗಿ ಈ ದುರ್ಘಟನೆ ನಡೆದು ಹೋಗಿತ್ತು ಎಂದರೆ ನನಗೆ ಗೊತ್ತಿಲ್ಲ. ಈ ಘಟನೆ ಗೊತ್ತಾಗಬಾರದು ಎಂದು ಪ್ರಾಸಾ-7 ಗೀತಾ ನನಗೆ ದೂರವಾಣಿ ಕರೆ ಮಾಡಿ ತಾಯಿ ಏನು ಮಾಡುತ್ತಿದ್ದಾರೆ ನೋಡಿಕೊಂಡು ಬಾ ಎಂದು ಹೇಳಿದಳು ಎಂದರೆ ಸಾಕ್ಷಿಯು ಕರೆ ಎತ್ತುತ್ತಿಲ್ಲ ಎಂದು ಮಾತ್ರ ಹೇಳಿದಳು.

10. ಶಾಂತಾಬಾಯಿ ಸಾವಿಗೆ ಅವಳ 4 ಜನ ಗಂಡು ಮಕ್ಕಳೇ ಕಾರಣವಾಗಿದ್ದು ನನಗೆ ಗೊತ್ತಿದ್ದರೂ ಸಹ ಅವರನ್ನು ಉಳಿಸಲು ನನಗೆ ಗೊತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

(ಅಶ್ವಿನಿ ವಿಜಯ ಶಿರಿಯಣ್ಣನವರ)
ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು ಮತ್ತು ಎಫ್.ಟಿ.ಎಸ್.ಸಿ-1
ಹಾವೇರಿ.